ಮುಕ್ತಿದಾಯಕ ಶಿಷ್ಟಜನ ಪರಿಪಾಲ ಪರಮ ।

ಶುದ್ಧಾತ್ಮ ಸುಗುಣಸಾಂದ್ರ ಸುಖವಾರಿಧಿ ।

ನಿದ್ರಾರಹಿತ ನಿದ್ರಾರಮಣ ನಿರ್ವಿಕಾರ ।

ಚಿದ್ದೇಹ ಸರ್ವಕಾಲ ಸುಂದರಸಾರ ।

ಪದ್ಮಸಂಭವ ಬಲಿ ಪ್ರಕ್ಷಾಲಿತ ಪಾದ ಮಹಾ ।

ಹೃದ್ರೋಗ ನಾಶ ವೈಕುಂಠವಾಸ ।

ವಿದ್ಯಾತೀತ ವಿಶ್ವನಾಟಕ ನಾರಾಯಣಾ।

ವಿದ್ಯಾ ಉದ್ಧಾರಕ ಉದಧಿಸದನ ।

ಸಿದ್ಧಾದಿ ವಿನುತ ಸಂತತ ಪಾತಾಳವಾಸಿ।

ಬುದ್ಧಿ ವಿಶಾಲಮಹಿಮ ಪಾಪಹಾರಿ।

ಖದ್ಯೋಥ ವರ್ಣ ಸಕಲವ್ಯಾಪ್ತ ಆಕಾಶ ಅಮಿತ

ಬದ್ಧ ವಿಚ್ಛೇದ ನಾನಾ ರೂಪಾತ್ಮಕಾ।

ಅದ್ವೈತ ಕಾಯಾ ಮಾಯಾರಮಣ ರಾಜೀವನೇತ್ರಾ।

ಅದ್ವೈಯ ಅನಾದಿ ಪುರುಷ ಚಿತ್ರ।

ಕರ್ದಮಮುನಿಸೂನು ವಿಜಯವಿಟ್ಟಲ ಕಪಿಲ ।

ನಿರ್ದೋಷ ಕರುಣಾಬ್ಧಿ ಸರ್ವರಾಧಾರಿ ॥೧॥

ಆದಿ ಮನ್ವಂತರದಿ ಜನಿಸಿದ ಮಹದ್ದೈವ।
ಆದಿ ಪರಬೊಮ್ಮ ಬೊಮ್ಮನ್ನೈಯ್ಯ ಜೀಯಾ।
ಸಾಧು ಜನರ ಪ್ರಿಯ ಸಂತತ ಮುನಿ ತಿಲಕ।
ಬೋಧಶರೀರ ಭಕುತರ ಮನೋಹರ ಹರಿ।
ಮಾಧವ ಸಿರಿ ವಿಜಯವಿಟ್ಟಲ ವಿಮಲೇಶ।
ವೇದ ಮತಿಯ ಕೊಡುವ ಕಪಿಲ ಭಗವನ್ಮೂರ್ತಿ । ೨ ।

ಘನ ಮಹಿಮ ಗೌಣಾಂಡದೊಳಗೆ ಲೀಲೆಯಿಂದ।
ಜನಿಸಿ ಮೆರೆದೆ ಬಿಂದು ಸರೋವರದಲ್ಲಿ।
ಮಿನುಗವ ದ್ವಯಹಸ್ತ ಅಪ್ರಾಕೃತಕಾಯಾ।
ಇನನಂತೆ ಒಪ್ಪುವ ಶಿರೋರುಹವೋ।
ಕನಕ ಪುತ್ತಲಿಯಂತೆ ಕಾಂತಿ ತ್ರಿಭುವನಕ್ಕೆ।
ಅನವರತ ತುಂಬಿ ತೂಗುತಲಿರವೊ।
ಜನನಿ ದೇವಹೂತಿಗೆ ಉಪದೇಶವನು ಮಾಡಿ।
ಗುಣ ಮೊದಲಾದ ಸತ್ವವ ತಿಳಿಸಿದೆ।
ತನುವಿನೊಳಗೆ ನೀನೇ ತಿಳಿದು ತಿಳಿದೇ ನಿತ್ಯ।
ಜನರನ್ನು ಪಾಲಿಸುವ ಕಪಿಲಾಖ್ಯನೆ।
ಅನುದಿನದಿ ನಿನ್ನ ಧ್ಯಾನವ ಮಾಡಿ ಮಣಿಯಿಂದ।

ಎಣಿಸುವ ಸಜ್ಜನಕ್ಕೆ ಜ್ಞಾನ ಕೊಡುವೆ।
ಎಣೆಗಾನೆ ನಿನ್ನ ಲೋಚನದ ಶಕ್ತಿಗೆ ಸಗರ।
ಜನಪ ನಂದನರನ್ನು ಭಂಗಿಸಿದೆ।
ಅನುಮಾನವಿದಕಿಲ್ಲ ನಿನ್ನ ನಂಬಿದ ಮೂಢ।
ಮನುಜನಿಗೆ ಮಹಾಪದವಿ ಬರುವದಯ್ಯ।
ಮುನಿಕುಲೋತ್ತಮ ಕಪಿಲ ವಿಜಯವಿಠ್ಠಲರೇಯ।
ಎನಗೆ ಯೋಗ ಮಾರ್ಗವನು ತೋರು ತವಕದಿಂದ।೩ ।

ಕಪಿಲ ಕಪಿಲ ಎಂದು ಪ್ರಾತಃಕಾಲದಿ ಎದ್ದು ।
ಸಪುತ ಸಾರಿಗೆಲಿ ನುಡಿದ ಮಾನವನಿಗೆ ।
ಅಪಜಯ ಮೊದಲಾದ ಕ್ಲೇಶಗಳೊಂದಿಲ್ಲ ।
ಅಪರಿಮಿತ ಸೌಖ್ಯ ಅವನ ಕುಲ ಕೋಟಿಗೆ ।
ಗುಪುತ ನಾಮವಿದು ಮನದೊಳಗಿಡುವದು।
ಕಪಟ ಜೀವರು ಈತನು ಒಬ್ಬ ಋಷಿಯೆಂದು।
ತಪಿಸುವರು ಕಾಣೋ ನಿತ್ಯ ನರಕದಲ್ಲಿ।
ಕೃಪಣವತ್ಸಲ ನಮ್ಮ ವಿಜಯವಿಟ್ಟಲರೇಯ।
ಕಪಿಲ ಅವತಾರವನು ಬಲ್ಲವಗೆ ಬಲು ಸುಲಭ।೪।

ಬಲ ಹಸ್ತದಲ್ಲಿ ಯಜ್ಞ ಶಾಲೆಯಲ್ಲಿ ಕಂ-
ಗಳ ಕಪಿನಲಿ ಹೃದಯ ಸ್ತನನಾಭಿಯಲಿ।
ಜಲದಿ ಗಂಗಾಸಂಗಮನದಲ್ಲಿ ಗಮನದಲ್ಲಿ।
ತುಲಸಿ ಪತ್ರದಲ್ಲಿ ತುರಗ ತುರುವಿನಲ್ಲಿ।
ಮಲಗುವ ಮನೆಯಲ್ಲಿ ನೈವೇದ್ಯ ಸಮಯದಲ್ಲಿ।
ಬಲು ಕರ್ಮಬಂಧಗಳು ಮೋಚಕವಾಗುವಲ್ಲಿ।
ಚೆಲುವನಾದವನಲ್ಲಿ ವಿದ್ಯೆ ಪೇಳುವನಲ್ಲಿ।
ಫಲದಲ್ಲಿ ಪ್ರತಿಕೂಲವಿಲ್ಲದ ಸ್ತಳದಲ್ಲಿ।
ಬೆಳೆದ ದರ್ಭೆಗಳಲ್ಲಿ ಅಗ್ನಿಯಲ್ಲಿ ಹರುಹುವ।
ಜಲದಲ್ಲಿ ಜಾಂಬುದ ನದಿಯಲ್ಲಿ ಶ್ಲೋಕದಲ್ಲಿ।
ಬಲಿಮುಖ ಬಳಗದಲ್ಲಿ ಆಚಾರಶೀಲನಲ್ಲಿ।
ಹೊಳೆವ ಮಿಂಚಿನಲಿ ಬಂಗಾರದಲಿ ಇನಿತು ।
ಕಾಲಕಾಲಕೆ ಬಿಡದೆ ಸ್ಮರಿಸು ಕಪಿಲಪರಮಾತ್ಮನ್ನ ।
ಗೆಲುವುಂಟು ನಿನಗೆಲವೋ ಸಂಸಾರದಿಂದ ವೇಗ।
ಕಲಿಯುಗದೊಳಗಿಡೆ ಕೊಂಡಾಡಿದವರಿಗೆ।
ಖಳರ ಅಂಜಿಕೆಯಿಲ್ಲ ನಿಂದಲ್ಲೇ ಶುಭ ಯೋಗ।
ಬಲವೈರಿನುತ ನಮ್ಮ ವಿಜಯವಿಟ್ಟಲರೇಯ।
ಇಳೆಯೊಳಗೆ ಕಪಿಲಾವತಾರನಾಗಿ ನಮ್ಮ ಭಾರ ವಹಿಸಿದ।೫।
ತಮ ಪರಿಚ್ಛೇಧ ಈತನ ಸ್ಮರಣೆ ನೋಡು
ಹೃದ್ಕಮಲದೊಳಗೆ ವಿಜಯವಿಠ್ಠಲನ ಚರಣಾಬ್ಜಾ ।೬।
।ಶ್ರೀ ವಿಜಯದಾಸರಿಂದ ವಿರಚಿತ ಶ್ರೀ ಕಪಿಲ ಸುಳಾದಿ ಸಂಪೂರ್ಣಂ।

## ಸಂಗ್ರಹ – ನರಹರಿಸುಮಧ್ವ(9916904341)

मुक्तिदायक शिष्टजन परिपाल परम ।
शुद्धात्म सुगुणसांद्र सुखवारिधि ।
निद्रारहित निद्रारमण निर्विकार ।
चिद्देह सर्वकाल सुंदरसार ।
पद्मसंभव बलि प्रक्षालित पाद महा ।
हृद्रोग नाश वैकुंठवास ।
विद्यातीत विश्वनाटक नारायणा।
विद्या उद्धारक उददिसदन ।
सिद्धादि विनुत संतत पाताळवासि।
बुद्धि विशालमहिम पापहारि।
खद्योथ वर्ण सकलव्याप्त आकाश अमित
बद्ध विच्चेद नाना रूपात्मका।
अद्वैत काया मायारमण राजीवनेत्रा।
अद्वैय अनादि पुरुष चित्रा।
कर्दममुनिसूनु विजयवि ल कपिल ।
निर्दोष करुणाब्धि सर्वराधारि ॥१॥

आदि मन्वंतरदि जनिसिद महदैव।
आदि परबोम्म बोम्मनैय्य जीया।
साधु जनर प्रिय संतत मुनि तिलका।
बोधशरीर भकुतर मनोहर हरि।
माधव सिरि विजयवि ल विमलेश।

मोद मतिय कॊडुव कपिल भगवन्मूर्ति । २ ।

घन महिम गौणांडदॊळगॆ लीलॆयिंद।
जनिसि मॆरॆदॆ बिंदु सरोवरदल्लि।
मिनुगव द्वयहस्त अप्राकृतकाया।
इननंतॆ ऒप्पुव शिरोरुहवो।
कनक पुत्तलियंतॆ कांति त्रिभुवनक्कॆ।
अनवरत तुंबि तूगुतलिरवॊ।
जननि देवहूतिगॆ उपदेशवनु माडि।
गुण मॊदलाद सत्वव तिळिसिदॆ।
तनुविनॊळगॆ नीने तिळिदु तिळिदे नित्य।
जनरन्नु पालिसुव कपिलाख्यनॆ।
अनुदिनदि निन्न ध्यानव माडि मणियिंद।
ऎणिसुव सज्जनक्कॆ ज्ञान कॊडुवॆ।
ऎणॆगानॆ निन्न लोचनद शक्तिगॆ सगर।
जनप नंदनरन्नु भंगिसिदॆ।
अनुमानविदकिल्ल निन्न नंबिद मूड।
मनुजनिगॆ महापदवि बरुवदय्या।
मुनिकुलोत्तम कपिल विजयविठ्ठलरेय।
ऎनगॆ योग मार्गवनु तोरु तवकदिंद।३ ।

कपिल कपिल ऍंदु प्रातःकालदि ऍद्दु ।
सपुत सारिगॊलि नुडिद मानवनिगॆ ।
अपजय मॊदलाद क्लेशगळॊंदिल्ल ।
अपरिमित सौख्य अवन कुल कोटिगॆ ।
गुपुत नावविदु मनदॊळगिड्डुवदु।
कपट जीवरु ईतनु ऒब्ब ऋषियॆंदु।
तपिसुवरु काणो नित्य नरकदल्लि।
कृपणवत्सल नम्म विजयवि लरेया।
कपिल अवतारवनु बल्लवगॆ बलु सुलभा।४।

बल हस्तदल्लि यज्ञ शालॆयल्लि कं–
गळ कपिनलि हृदय स्तननाभियलि।
जलदि गंगासंगमनदल्लि गमनदल्लि।
तुलसि पत्रदल्लि तुरग तुरुविनल्लि।
मलगुव मनॆयल्लि नैवेद्य समयदल्लि।
बलु कर्मबंधगळु मोचकवागुवल्लि।
चॆलुवनादवनल्लि विद्यॆ पॆळुवनल्लि।
फलदल्लि प्रतिकूलविल्लद स्तळदल्लि।
बॆळॆद दर्भॆगळल्लि अग्नियल्लि हरुहुव।
जलदल्लि जांबुद नदियल्लि श्लोकदल्लि।

बलिमुख बळगदल्लि आचारशीलनल्लि।
हॊळॆव मिंचिनलि बंगारदलि इनितु ।
कालकालकॆ बिडदॆ स्मरिसु कपिलपरमात्मन्न ।
गॆलुवुंटु निनगॊलवो संसारदिंद वेग।
कलियुगदॊळगिडॆ कॊंडाडिदवरिगॊ।
खळर अंजिकॆयिल्ल निंदल्ले शुभ योग।
बलवैरिनुत नम्म विजयवि लरॆय।
इळॆयॊळगॊ कपिलावतारनागि नम्म भार वहिसिद।५।

तम परिच्चेध ईतन स्मरणॆ नोडु
हृद्कमलदॊळगॊ विजयविठ्ठलन चरणाब्जा ।६।
। श्री विजयदासरिंद विरचित श्री कपिल सुळादि संपूर्णं।

संग्रह – नरहरिसुमध्व